**ಕರ್ನಾಟಕ ಸರ್ಕಾರ**

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**

**ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

**ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2019–20** **ದಿನಾಂಕ : 17–09–2019**

## ಪತ್ರಿಕಾ ಆಮಂತ್ರಣ

# ಮಾಧ್ಯಮದವರ ಗಮನಕ್ಕೆ

ಹೊರ ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಮುದ್ರಣ ಮಾಧ್ಯಮವನ್ನು ಪ್ರತಿನಿಧಿಸುವ ಮಾನ್ಯತೆ ಪಡೆದ ಓರ್ವ ವರದಿಗಾರ ಹಾಗೂ ಓರ್ವ ಛಾಯಾಗ್ರಾಹಕರಿಗೆ ಹಾಗೂ ವಿದ್ಯುನ್ಮಾನ ಮಾಧ್ಯಮವನ್ನು ಪ್ರತಿನಿಧಿಸುವ ಇಬ್ಬರು ವರದಿಗಾರರು ಹಾಗೂ ಇಬ್ಬರು ಕ್ಯಾಮರಾಮೆನ್‌ಗಳಿಗೆ ವಿಶ್ವ ವಿಖ್ಯಾತ ಮೈಸೂರು ದಸರಾದ ವರದಿಗಾಗಿ ದಸರಾ ವಿಶೇಷಾಧಿಕಾರಿಗಳೂ ಆದ ಮೈಸೂರು ಜಿಲ್ಲಾಧಿಕಾರಿಗಳು ಪಾಸ್‌ಗಳನ್ನು ನೀಡಲಿದ್ದಾರೆ.

ಆಸಕ್ತರು ಕೆಳಕಂಡ ನಮೂನೆಯಲ್ಲಿ ಸೂಕ್ತ ದಾಖಲೆಗಳೊಂದಿಗೆ ಸೆಪ್ಟೆಂಬರ್ 21 ರೊಳಗೆ ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ

## ಮೈಸೂರು ದಸರಾ ಮಹೋತ್ಸವ – 2019
## ಮಾಧ್ಯಮ ಪಾಸ್ ಕೋರಿಕೆ ನಮೂನೆ

ಪಾಸ್‌ಪೋರ್ಟ್

ಅಳತೆ ಭಾವಚಿತ್ರ

1. ಹೆಸರು

   **NAME**

2. ಹುದ್ದೆ:
   **DESIGNATION:**

3. ಪ್ರತಿನಿಧಿಸುವ ಮಾಧ್ಯಮ:
   **NAME OF MEDIA**

4. ದೂರವಾಣಿ ಸಂಖ್ಯೆ
   **TELEPHONE NO**

5. ಮೊಬೈಲ್ ಸಂಖ್ಯೆ
   **MOBILE NO.**

6. ವಿಳಾಸ
   **ADDRESS**

ಕೋರಿಕೆದಾರರ ಸಹಿ                                        ಸಂಸ್ಥೆ ಮುಖ್ಯಸ್ಥರ ಸಹಿ ಹಾಗೂ ಮೊಹರು

(ಅರ್ಜಿಯಲ್ಲಿ ಒಂದು ಭಾವಚಿತ್ರವನ್ನು ಅಂಟಿಸುವುದು ಹಾಗೂ ಅರ್ಜಿಯೊಂದಿಗೆ ಪ್ರತ್ಯೇಕವಾಗಿ ಒಂದು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನನು ಭಾವಚಿತ್ರದ ಹಿಂಭಾಗದಲ್ಲಿ ಹೆಸರು, ಪದನಾಮ ಹಾಗೂ ಮಾಧ್ಯಮದ ಹೆಸರು ನಮೂದಿಸಿ ನೀಡುವುದು, ಹೆಸರು ಹುದ್ದೆ ಹಾಗೂ ಪ್ರತಿನಿಧಿಸುವ ಮಾಧ್ಯಮವನ್ನು ಆಂಗ್ಲ ಭಾಷೆಯಲ್ಲೂ ಸಹ ಭರ್ತಿ ಮಾಡುವುದು)

**Mysuru Dasara -2019**

**<u>Application for Media Pass</u>**

| |
|---|
| AFFIX PASSPORT SIZE PHOTOGRAPH |

**1. NAME :**

**2. DESIGNATION :**

**3. NAME OF THE MEDIA INSTITUTION :**

**4. ADDRESS :**

**5. TELEPHONE:**

**LANDLINE:**

**MOBILE**

| | |
|---|---|
| **SIGNATURE OF THE APPLICANT** | **SIGNATURE OF HEAD OF MEDIA INSGTITUTION** |

**PLEASE AFFIX ONE PASSPORT SIZE PHOTOGRAPH AND ENCLOSE ONE PASSPORT SIZE PHOTOGRAPH STATING NAME, DESIGNATION, NAME OF MEDIA IN A SEPARATE COVER.**

## ಸೆಪ್ಟಂಬರ್ 22 ರಂದು ಸೊಲ್ಲಾಪುರದಲ್ಲಿ ಕನ್ನಡ ಮಾಧ್ಯಮ ಪ್ರಶಸ್ತಿ ಪ್ರದಾನ ಸಮಾರಂಭ

**ಬೆಂಗಳೂರು, ಸೆಪ್ಟೆಂಬರ್ 18 (ಕರ್ನಾಟಕ ವಾರ್ತೆ) :**

ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಹೊರರಾಜ್ಯ ಮಹಾರಾಷ್ಟ್ರ ವಿದ್ಯಾರ್ಥಿಗಳಿಗೆ 2019-20ನೇ ಸಾಲಿನ ಕನ್ನಡ ಮಾಧ್ಯಮ ಪ್ರಶಸ್ತಿ ಪ್ರದಾನ ಸಮಾರಂಭವನ್ನು ದಿನಾಂಕ 22-09-2019ರಂದು ಬೆಳಗ್ಗೆ 10-30ಕ್ಕೆ ಸೊಲ್ಲಾಪುರದ ಅಕ್ಕಲಕೋಟಾ ರಸ್ತೆಯ ವೀರತಪಸ್ವಿ ಶಿಕ್ಷಣ ಸಂಕುಲದ ಸಭಾಂಗಣದಲ್ಲಿ ಆಯೋಜಿಸಿದೆ.

ಕರ್ನಾಟಕ ಸರ್ಕಾರದ ಮಾನ್ಯ ಪ್ರವಾಸೋದ್ಯಮ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾದ ಶ್ರೀ ಸಿ.ಟಿ.ರವಿ ಇವರು ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಲಿದ್ದು, ಮಹಾರಾಷ್ಟ್ರ ಸರ್ಕಾರದ ಮಾನ್ಯ ಸಾರಿಗೆ ಸಚಿವರು ಹಾಗೂ ಸೊಲ್ಲಾಪುರ ಜಿಲ್ಲಾ ಉಸ್ತುವಾರಿ ಸಚಿವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಸೊಲ್ಲಾಪುರದ ಮಾನ್ಯ ಸಂಸದರಾದ ಶ್ರೀ ಷ.ಬ್ರ.ಜಯಸಿದ್ದೇಶ್ವರ ಶಿವಾಚಾರ್ಯ ಸ್ವಾಮಿಗಳು ಹಾಗೂ ಕಲಬುರ್ಗಿಯ ಮಾನ್ಯ ಸಂಸದರಾದ ಡಾ.ಉಮೇಶ್ ಜಿ. ಜಾದವ್ ಇವರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಸರ್ಕಾರದ ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಆರ್.ಆರ್. ಜನ್ನು ಇವರು ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಕನ್ನಡದ ಹಿರಿಯ ಸಾಹಿತಿಗಳಾದ ಪ್ರೊ.ಕಾಳೇಗೌಡ ನಾಗವಾರ ಇವರು ಪ್ರಶಸ್ತಿ ಪುರಸ್ಕೃತ ವಿದ್ಯಾರ್ಥಿಗಳನ್ನುದ್ದೇಶಿಸಿ ಹಿತನುಡಿಗಳನ್ನಾಡಲಿದ್ದಾರೆ.

ಮುದ್ದೇಬಿಹಾಳದ ಮಾನ್ಯ ಶಾಸಕರಾದ ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ, ಅಫಜಲ್‌ಪುರದ ಮಾನ್ಯ ಶಾಸಕರಾದ ಶ್ರೀ ಮಾಲಿಕಯ್ಯ ವಿ. ಗುತ್ತೇದಾರ್, ಹಿರಿಯ ಪತ್ರಕರ್ತರಾದ ಶ್ರೀ ಸತ್ಯ ನಾರಾಯಣ ಬಿ.ಎಸ್. ಇವರು ವಿಶೇಷ ಆಹ್ವಾನಿತರಾಗಿ ಭಾಗವಹಿಸಲಿದ್ದಾರೆ. ಬೃಹನ್ಮಠ ವೀರತಪಸ್ವಿ ಸಂಸ್ಥಾನ ಸೊಲ್ಲಾಪುರದ ಪೂಜ್ಯ ಶ್ರೀ ಧರ್ಮರತ್ನಾಕರ ಡಾ.ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು, ನಾಗಣಸೂರು, ಶ್ರೀ ಗುರು ಬಮಲಿಂಗೇಶ್ವರ ಹಿರೇಮಠದ ಪೂಜ್ಯ ಶ್ರೀ ಷ.ಬ್ರ.ಶ್ರೀಕಂಠ ಶಿವಾಚಾರ್ಯ ಸ್ವಾಮಿಗಳು, ಮಂದ್ರರೂಪ ಸಂಸ್ಥಾನದ ಪೂಜ್ಯ ಶ್ರೀ ಷ.ಬ್ರ. ರೇಣುಕಾಶಿವಾಚಾಯ್ ಸ್ವಾಮಿಗಳು, ಮೈಂದರಗಿ ಸಂಸ್ಥಾನದ ಪೂಜ್ಯ ಶ್ರೀ ನೀಲಕಂಠ ಶಿವಚಾರ್ಯ ಸ್ವಾಮಿಗಳು ಮತ್ತು ಕರಿಬಂಟನಾಳದ ಪೂಜ್ಯ ಶ್ರೀ ಶಿವಮಕುಮಾರ ಸ್ವಾಮಿಗಳು ದಿವ್ಯಸಾನಿಧ್ಯ ವಹಿಸಲಿದ್ದಾರೆ. ಸೊಲ್ಲಾಪುರ ಜಿಲ್ಲಾಧಿಕಾರಿ, ಡಾ. ರಾಜೇಂದ್ರ ಬೋಸ್ಲೇ, ಭಾ.ಆ.ಸೇ., ಸೊಲ್ಲಾಪುರ ನಗರ ಪೊಲೀಸ್ ಆಯುಕ್ತರಾದ ಶ್ರೀ ಅಂಕುಶ್ ಆರ್. ಸಿಂಧೆ ಸೇರಿದಂತೆ ಇನ್ನು ಹಲವರು ಕಾರ್ಯಕ್ರಮದಲ್ಲಿ ಗೌರವ ಉಪಸ್ಥಿತರಿರುತ್ತಾರೆ.

ಪುರಸ್ಕಾರವು ಪ್ರಥಮ ನಗದು ಬಹುಮಾನ ₹.10,000/-, ದ್ವಿತೀಯ ನಗದು ಬಹುಮಾನ ₹.9,000/- ತೃತೀಯ ನಗದು ಬಹುಮಾನ ₹.8,000/- ಗಳಲ್ಲದೆ ಹಾಗೂ ಪ್ರಮಾಣಪತ್ರ ಒಳಗೊಂಡಿದೆ. ಪ್ರಸ್ತುತ ಎಸ್.ಎಸ್.ಸಿ. ಯ 253 ಹಾಗೂ ಹೆಚ್.ಎಸ್.ಸಿ ಯ 60 **ಒಟ್ಟು 313** ವಿದ್ಯಾರ್ಥಿಗಳಿಗೆ ಕನ್ನಡ ಮಾಧ್ಯಮ ಪ್ರಶಸ್ತಿಯನ್ನು ನೀಡಿ ಗೌರವಿಸಿ, ಸನ್ಮಾನಿಸಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

## ಚಳಿಗಾಲದ ವಿಶೇಷ ಪ್ರವಾಸಗಳು

**ಬೆಂಗಳೂರು, ಸೆಪ್ಟೆಂಬರ್ 18 (ಕರ್ನಾಟಕ ವಾರ್ತೆ) :**

ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ರಾಜ್ಯಕ್ಕೆ ಆಗಮಿಸುವ ಪ್ರವಾಸಿಗರಿಗೆ ರಾಜ್ಯ ಹಾಗೂ ಅಂತರರಾಜ್ಯದ ವಿವಿಧ ಪ್ರವಾಸಿ ತಾಣಗಳಿಗೆ ವ್ಯವಸ್ಥಿತ ಪ್ರವಾಸಗಳನ್ನು ಏರ್ಪಡಿಸುವುದರೊಂದಿಗೆ, ಸಾರಿಗೆ ಸೌಲಭ್ಯವನ್ನು ಒದಗಿಸುತ್ತಿದೆ. ಈ ನಿಟ್ಟಿನಲ್ಲಿ ನಿಗಮವು ಮುಂಬರುವ ಋತುಮಾನ ದಿನಗಳಲ್ಲಿ ಅಂದರೆ

ಅಕ್ಟೋಬರ್–ಜನವರಿ ತಿಂಗಳಲ್ಲಿ ಉತ್ತರ ಕರ್ನಾಟಕ ಪಾರಂಪರಿಕ ಸ್ಥಳಗಳಿಗೆ 05 ದಿನಗಳ ವ್ಯವಸ್ಥಿತ ಪ್ರವಾಸವನ್ನು ಆಯೋಜಿಸುತ್ತಿದ್ದು, ಈ ಪ್ರವಾಸವು ಪ್ರತಿ ಗುರುವಾರ ಆರಂಭವಾಗಿ ಸೋಮವಾರ ಬೆಳಿಗ್ಗೆ ಕೊನೆಗೊಳ್ಳುತ್ತದೆ. ಸದರಿ ಪ್ರವಾಸಕ್ಕೆ ಒಬ್ಬರಿಗೆ ರೂ.5170/– (ಸಾರಿಗೆ ಮತ್ತು ವಸತಿ ಸೌಲಭ್ಯ ಸೇರಿ) ಆಗಲಿದೆ.

ಸಮುದ್ರತೀರ ಪ್ರವಾಸವಾಗಿ ಗೋವಾ–ಗೋಕರ್ಣಕ್ಕೆ ಪ್ರವಾಸವನ್ನು ಅಯೋಜಿಸಲಿದ್ದು, ಇದು 05 ದಿನಗಳ ಪ್ರವಾಸವಾಗಿರುತ್ತದೆ. ಈ ಪ್ರವಾಸವು ಪ್ರತಿ ಗುರುವಾರ ಆರಂಭವಾಗಿ ಸೋಮವಾರ ಬೆಳಿಗ್ಗೆ ಕೊನೆಗೊಳ್ಳುತ್ತದೆ. ಸದರಿ ಪ್ರವಾಸಕ್ಕೆ ಒಬ್ಬರಿಗೆ ರೂ. 6599/– (ಸಾರಿಗೆ ಮತ್ತು ವಸತಿ ಸೌಲಭ್ಯ ಸೇರಿ) ಆಗಲಿದೆ.

ಈ ಪ್ರವಾಸಗಳನ್ನು ಎ.ಸಿ ಡಿಲಕ್ಸ್ ವಾಹನ ಸೌಲಭ್ಯದೊಂದಿಗೆ ಆಚರಿಸುತ್ತಿದ್ದು, ಮುಂಗಡ ಬುಕ್ಕಿಂಗ್ ವ್ಯವಸ್ಥೆಯನ್ನು ನಿಗಮದ ಬುಕ್ಕಿಂಗ್ ಕೌಂಟರ್‌ಗಳು ಕೆ.ಎಸ್.ಆರ್.ಟಿ.ಸಿ ಅವತಾರ್ ಪೋರ್ಟಕ್ ಹಾಗೂ ರೆಡ್‌ಬಸ್ ಪೋರ್ಟಲ್ ಮುಖಾಂತರ ಮಾಡಲಾಗುತ್ತಿದೆ. ಪ್ರವಾಸದ ಬುಕ್ಕಿಂಗ್‌ಗಾಗಿ ಯಶವಂತಪುರದಲ್ಲಿರುವ ಪ್ರಧಾನ ಬುಕ್ಕಿಂಗ್ ಕೇಂದ್ರವನ್ನು ಹಾಗೂ ಕೆಂಪೇಗೌಡ ಬಸ್‌ನಿಲ್ದಾಣದಲ್ಲಿನ ನಿಗಮದ ಕೌಂಟರ್‌ನ್ನು ಸಂಪರ್ಕಿಸಬಹುದಾಗಿದೆ. ಅಲ್ಲದೆ, ನಿಗಮದ ಅಧಿಕೃತ ಏಜೆಂಟ್ ಮುಖಾಂತರ ಬುಕ್ಕಿಂಗ್ ಮಾಡಬಹುದಾಗಿದ್ದು, ಹೆಚ್ಚಿನ ಮಾಹಿತಿಗಾಗಿ ಈ ಕೆಳಕಂಡ ದೂರವಾಣಿಗಳನ್ನು ಸಂಪರ್ಕಿಸಬಹುದಾಗಿದೆ. ಆನ್‌ಲೈನ್ ಬುಕ್ಕಿಂಗ್ www.kstdc.com, ದೂರವಾಣಿ ಸಂಖ್ಯೆ: 080–4334 4334/35, +91 8970650070 / +91 8970650075.

## KSTDC ENGAGES SOCIAL PANGA AGENCY TO SUPPORT KARNATAKA TOURISM FOR DIGITAL STRATEGY AND PROMOTE KARNATAKA AS A PREFERRED TOURIST DESTINATION.

~~~~~~~~~

Bengaluru-based digital agency Social Panga has been selected by the KSTDC as their digital marketing partner. The agency’s Bengaluru office will work with the Department of Tourism (DoT) and KSTDC, to fulfil the department’s digital promotion requirements.

The mandate will cover the management of Karnataka Tourism’s social media channels and will focus on implementing strategies that aim to both modernize its digital infrastructure and increase tourist footfall in the state.
~~~~~~~~~

“We partnered with Social Panga with the idea to use their expertise to roll out digital campaigns in an effective manner. We believe that digital media will be a preferred medium for content consumption in coming future & we will benefit from this partnership in promoting the State’s attractions that are closest to people’s hearts. We look forward to working with Social Panga & very excited about this partnership”, said Kumar Pushkar, Managing Director at KSTDC. It may be noted that KSTDC has been mandated by Department of Tourism to manage its website as well as digital and social media.

Speaking after the successful reception of this mandate, Himanshu Arora, Co-Founder, Social Panga reiterated the Director’s sentiments. “We regard Karnataka Tourism as a big win for us and are excited to be an integral part of the brand’s journey ahead. There are many hidden gems in Karnataka that are still unexplored by both its local and national population. The initiatives taken by the department are geared towards creating greater awareness regarding these locations that will ultimately transform into both revenue as well as cultural heritage in the long run”.

The Department of Tourism, Government of Karnataka, was established in 1974 and is vested with the responsibility to develop and promote Karnataka Tourism. The Department continuously endeavors to promote Karnataka Tourism by developing new tourism destinations, foster new tourism projects and by participating in national and international tourism trade fairs, investors’ meet, road shows, theme campaigns, etc.

## ಸಚಿವರ ಪ್ರವಾಸ

**ಬೆಂಗಳೂರು, ಸೆಪ್ಟೆಂಬರ್ 18 (ಕರ್ನಾಟಕ ವಾರ್ತೆ) :**

ವಸತಿ ಸಚಿವ ಶ್ರೀ ವಿ. ಸೋಮಣ್ಣ ಅವರು ಸೆಪ್ಟೆಂಬರ್ 23 ರಂದು ಮಡಿಕೇರಿ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಅಂದೇ ರಾತ್ರಿ ಕೇಂದ್ರಸ್ಥಾನಕ್ಕೆ ಹಿಂದಿರುಗುವರು.

## ಸಚಿವರ ಪ್ರವಾಸ

ಬೆಂಗಳೂರು,ಸೆಪ್ಟೆಂಬರ್ 18 ( ಕರ್ನಾಟಕ ವಾರ್ತೆ ) :

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವ ಎಸ್. ಸುರೇಶ್‌ಕುಮಾರ್ ಅವರು ಸೆಪ್ಟೆಂಬರ್ 19 ಮತ್ತು 20 ರಂದು ತುಮಕೂರು ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು, ಸೆಪ್ಟೆಂಬರ್ 20 ರಂದೇ ನಗರಕ್ಕೆ ಹಿಂತಿರುಗಲಿದ್ದಾರೆ.

## DAK ADALAT

Bengaluru, Sept 18, 2019 (Karnataka Information)

A Dak Adalat will be held at Jayanagar Head Post Office building (Ground Floor) 11th main, 4th T. Block, Bengaluru – 560 041 on 24-09-2019 at 11.00 hours. Grievances or complaints relating to postal services like delivery of mails, speed post articles, parcels, money order, savings bank, cash certificate and counter services if any pertaining to Bengaluru South Division may be sent to the Senior Superintendent of Post Offices, Bengaluru South Division, Bengaluru – 560 041 for redressal in the Adalat. Grievances can also can be sent by email to dobangaloresouth.ka@indiapost.gov.in by 21-09-2019 says an official press release.